2023

QUESTION PAPER

AGLASEM.COM

KANNADA

Maximum Marks: 80
Time Allowed: Three hours
*(Candidates are allowed **additional 15 minutes** for **only** reading the paper.*
*They must **NOT** start writing during this time.)*

*Answer **Questions 1, 2 and 3 in Section A** and **four** questions from **Section B** on **any three** out of the four prescribed textbooks.*
The intended marks for questions or parts of questions are given in brackets[ ].

SECTION A
LANGUAGE - 40 MARKS

Question 1 **[15]**

Write a composition in approximately 400 words in Kannada on *any one* of the topics given below.

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿ 400 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.

(i) ನಗರೀಕರಣ, ಕೈಗಾರೀಕರಣ ಹಾಗೂ ವಾಹನ ದಟ್ಟಣೆಗಳಿಂದ ಅಧಿಕ ಹವಾಮಾಲಿನ್ಯ ಉಂಟಾಗುತ್ತಿದ್ದು ಇದರ ಪರಿಣಾಮಗಳು ಹಾಗೂ ಇದನ್ನು ತಡೆಗಟ್ಟುವ ಕುರಿತಾಗಿ ಒಂದು ಪ್ರಬಂಧ ಬರೆಯಿರಿ.

(ii) ನೀವು ನೋಡಿ ಆನಂದಿಸಿದ ಪ್ರಾತಃಕಾಲದ ಸೂರ್ಯೋದಯ, ಹಕ್ಕಿಗಳ ಕಲರವ ಪ್ರಕೃತಿಗೆ ಹೊಸ ಜೀವನ, ಸೃಷ್ಟಿಗೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ವಿವರಿಸುತ್ತಾ ಒಂದು ಪ್ರಬಂಧ ಬರೆಯಿರಿ.

(iii) ನೀವು ಜೀವನದಲ್ಲಿ ಏನಾಗಬೇಕೆಂದಿದ್ದೀರಿ? ಆ ವಿಷಯದಲ್ಲಿ ನಿಮ್ಮ ಆದರ್ಶ ವ್ಯಕ್ತಿ ಯಾರು? ಏಕೆ ? ವಿವರಿಸಿ.

(iv) ಅರಣ್ಯ ಸಂರಕ್ಷಣೆ ಪತಿಯೊಬ್ಬ ಮಾನವನ ಆದ್ಯಕರ್ತವ್ಯ ಈ ಬಗ್ಗೆ ನಿಮ್ಮ ಅಭಿಪ್ರಾಯ ಅನಿಸಿಕೆಗಳನ್ನು ತಿಳಿಸುತ್ತಾ ಒಂದು ಪ್ರಬಂಧ ಬರೆಯಿರಿ.

(v) 'ಆರೋಗ್ಯ ನಿಯಂತ್ರಣದಲ್ಲಿ ಆಹಾರದ ಪಾತ್ರ' ಇದರ ಬಗ್ಗೆ ಚರ್ಚಿಸಿ.

(vi) ಕೆಳಗೆ ನೀಡಲಾದ ಯಾವುದಾದರೊಂದು ವಿಷಯದ ಬಗ್ಗೆ ಮೂಲಕಥೆಯನ್ನು ಬರೆಯಿರಿ.

(a) '.....ನನ್ನ ಸಮಯಪ್ರಜ್ಞೆ ಅಂದು ನನ್ನ ಕಾಪಾಡಿತು ಎಂದರೆ ತಪ್ಪಾಗದು..' ಎಂದು ಕೊನೆಯಾಗುವ ಒಂದು ಕಾಲ್ಪನಿಕ ಕಥೆಯನ್ನು ಬರೆಯಿರಿ.

(b) 'ಇಂದಿನ ಸೋಲು ನಾಳಿನ ಗೆಲುವು' – ಎಂಬ ಮಾತಿನಂತೆ, ಜೀವನದಲ್ಲಿ ಇವೆರಡನ್ನು ಹೇಗೆ ಸ್ವೀಕರಿಸಬೇಕು, ಉದಾಹರಣೆಯೊಂದಿಗೆ ವಿವರಿಸಿ.

© Copyright reserved.

Question 2

Read the passage given below carefully and answer the questions that follow, using your own words in Kannada.

ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿ.

ಇಪ್ಪತ್ತು ಅಡಿ ಉದ್ದ, ಒಂದು ಅಡಿ ಅಗಲ ಮತ್ತು ಎರಡು ಇಂಚು ದಪ್ಪದ ಒಂದು ಹಲಗೆ ಯನ್ನು ನೆಲದ ಮೇಲೆ ಇಟ್ಟು ಅದರ ಮೇಲೆ ನಡೆಯಲು ಬಾಲಕನೊಬ್ಬನಿಗೆ ಹೇಳಿ. ಅವನು ಸ್ವಲ್ಪವೂ ಗಾಬರಿಗೊಳ್ಳದೆ ಸರಾಗವಾಗಿ ನಡೆಯುತ್ತಾನಷ್ಟೆ. ಹಾಗೆ ನಡೆಯ ಹೊರಟ ಅವನ ಸಂಕಲ್ಪ ಅಥವಾ ಇಚ್ಛಾ ಶಕ್ತಿಗೆ ಯಾವ ಭಯದ ಕಲ್ಪನೆಯೂ ತಡೆಯನ್ನೊಡ್ಡುವುದಿಲ್ಲ. ಈಗ ಅದೇ ಹಲಗೆಯನ್ನು ಇಪ್ಪತ್ತು ಅಡಿ ಎತ್ತರದ ಎರಡು ಕಂಬಗಳ ಮೇಲೆ ಸೇತುವೆಯಂತೆ ಇಟ್ಟು ಆ ಬಾಲಕನಿಗೆ ಅದರ ಮೇಲೆ ನಡೆಯುವಂತೆ ಹೇಳಿ. ತಾನೂ ಹಾಗೆ ನಡೆಯುವಾಗ ಬಿದ್ದು ಬಿಡಬಹುದೆಂಬ ಭಯದ ಕಲ್ಪನೆ ಅವನನ್ನು ಆವರಿಸುತ್ತದೆ. ಧೈರ್ಯ ನೀಡಿದರೂ, ಬಹುಮಾನದ ಆಸೆ ತೋರಿಸಿದ್ದರು, ಅವನು ಆ ಹಲಗೆಯ ಮೇಲೆ ನಡೆಯುವ ಸಾಹಸ ಮಾಡಲಾರ. ಒಂದು ವೇಳೆ ಒತ್ತಾಯಕ್ಕೆ ಮಣಿದು ಪ್ರಯತ್ನಿಸಿ ನೋಡುತ್ತೇನೆಂದು ದೃಢ ಸಂಕಲ್ಪ ಮಾಡಿ ನಡೆದು ಹೊರಟರೂ ಒಂದು ಹೆಜ್ಜೆ ಇಡುತ್ತಲೇ ಭಯದಿಂದ ತತ್ತರಿಸಿ ಅಲ್ಲೇ ಕುಳಿತುಬಿಡುತ್ತಾನೆ. ಅವನ ಇಚ್ಛಾಶಕ್ತಿಗೂ ಭಯದ ಕಲ್ಪನೆಗೂ, ನಡೆದ ಸಂಘರ್ಷದಲ್ಲಿ ಭಯದ ಕಲ್ಪನೆಯೂ ಇಚ್ಛಾಶಕ್ತಿಯ ವರ್ಗದಷ್ಟು ಬಲವತ್ತರವಾಗುವುದು. ಇಚ್ಛಾಶಕ್ತಿಯು "ನಡೆಯಲು ಯತ್ನಿಸು ಬಹುಮಾನ ಸಿಗುತ್ತದೆ" ಎಂದು ಅವನನ್ನು ಪ್ರೇರೇಪಿಸುತ್ತದೆ. ಆದರೆ ಭಯದ ಕಲ್ಪನೆ– "ನೀನು ನಡೆದರೆ ಕೆಳಗೆ ಬಿದ್ದು ಕೈಕಾಲು ಮುರಿದುಕೊಳ್ಳುವುದು ಖಂಡಿತ", ಎನ್ನುತ್ತದೆ.

ಭಯದ ಕಲ್ಪನೆಯು ಇಚ್ಛಾಶಕ್ತಿಯನ್ನು ಸೋಲಿಸಿ ತಾನೇ ವಿರಾಜಿಸುತ್ತದೆ! ತನ್ನಿಂದ ಅಷ್ಟು ಎತ್ತರವಾದ ಹಲಗೆಯ ಮೇಲೆ ನಡೆಯಲು ಅಸಾಧ್ಯ ಎಂದು ನಂಬಿದ್ದ ಬಾಲಕನನ್ನೇ ಕ್ರಮ ಕ್ರಮವಾಗಿ ಹಲಗೆಯ ಎತ್ತರವನ್ನು ಏರಿಸುತ್ತಾ ನಡೆಯುವಂತೆ ಪ್ರೋತ್ಸಾಹಿಸಿದರೆ ಅವನ ಭಯವು ದೂರವಾಗಿ ತನ್ನಿಚ್ಛೆಯಂತೆ ಸಲೀಸಾಗಿ ಅವನು ನಡೆಯಬಲ್ಲ. ಆಗ ಭಯದ ಕಲ್ಪನೆ ಅವನನ್ನು ಬಾಧಿಸುವುದಿಲ್ಲ.ಇಚ್ಛಾಶಕ್ತಿಯನ್ನು ಭಯದ ಕಲ್ಪನೆ ತಡೆಹಿಡಿಯುವುದಿಲ್ಲ. ಆಗ ಅವು ಒಮ್ಮುಖವಾಗಿ ಹರಿಯುತ್ತವೆ. ನೆಲದ ಮೇಲೆ ಹಲಗೆಯನ್ನು ಹಾಕಿದ್ದಾಗ ನಿರ್ಭೀತಿಯಿಂದ ಸಲೀಸಾಗಿ ನಡೆದಂತೆಯೇ ಇಪ್ಪತ್ತು ಅಡಿಗಳಷ್ಟು ಎತ್ತರದ ಈ ಹಲಗೆಯ ಮೇಲೆ ಆಗ ಅವನು ನಡೆಯಬಲ್ಲ.

ಈಗ ವಿಶ್ವಾಸ ಅಥವಾ ನಂಬಿಕೆಯ ಬಗೆಗೆ ನಾವೊಂದು ಸಿದ್ಧಾಂತವನ್ನು ಕಂಡುಕೊಳ್ಳಬಹುದು. ನಂಬಿಕೆ ಅಥವಾ ವಿಶ್ವಾಸವೆಂದರೆ ವಿರೋಧ ಅಥವಾ ನಿಷೇಧಾತ್ಮಕವಲ್ಲದ ಕಲ್ಪನೆಗಳ ಸಾರ. ಪ್ರಥಮ ಬಾರಿ ಇಪ್ಪತ್ತು ಅಡಿಗಳಷ್ಟು ಎತ್ತರದ ಹಲಗೆಯ ಮೇಲೆ ನಿಂತಾಗ ಹುಡುಗನ ಮನಸ್ಸಿನಲ್ಲಿ ತಾನು ಬಿದ್ದು ಬಿಡಬಹುದು ಎಂಬ ಭಯದ ಕಲ್ಪನೆ ಇತ್ತು. ನಿಯಮಿತವಾಗಿ ಮಾಡಿದ, ಕ್ರಮವಾದ ಅಭ್ಯಾಸದಿಂದ , ಈ ನಿಷೇಧಾತ್ಮಕ ಭಯದ ಕಲ್ಪನೆಯೂ ದೂರವಾಗಿ , "ಸಾಧ್ಯ" ಎನ್ನುವ ರಚನಾತ್ಮಕ ಕಲ್ಪನೆಯೂ ದೃಢವಾಯಿತು. ವಿಶ್ವಾಸವೂ ಅನುಭವದಿಂದ ದೃಢಪಡಿಸಿಕೊಂಡ ಕಲ್ಪನೆ ಎಂದಾಯಿತು. ವಿಶ್ವಾಸವು ಕಲ್ಪನೆಗಿಂತ ಭಿನ್ನವಾಗಿದೆ. ವಿಶ್ವಾಸವಿಲ್ಲದೆ ಹಲವಾರು ಕಲ್ಪನೆಗಳನ್ನು ನೀವು ಮಾಡಬಹುದು. ಆದರೆ ಕಲ್ಪನೆಗಳ ಬೆಂಬಲವಿಲ್ಲದೆ ವಿಶ್ವಾಸವಿರದು.

ತಿದ್ದಿ ಬೆಳೆಸಿಕೊಂಡ ಪ್ರಯೋಗ , ಪರೀಕ್ಷೆಗಳಿಂದ ದೃಢಪಡಿಸಿಕೊಂಡ, ಒರೆಹಚ್ಚಿ ಅನುಭವದ ಮೂಲಕ ದೃಢಪಡಿಸಿಕೊಂಡ ಕಲ್ಪನೆಯೇ ವಿಶ್ವಾಸ, ಹುಡುಗನಿಗೆ ಅಷ್ಟು ಎತ್ತರವಿರುವ ಹಲಗೆಯ ಮೇಲೆ ನಡೆದ ವಿಶ್ವಾಸವಿದೆ ಎಂದರೆ ಏನರ್ಥ? ಭಯದ ಕಲ್ಪನೆಗಳೂ ಮೂಡದೆ ಸಲೀಸಾಗಿ ನಡೆಯಬಲ್ಲೆ ಎನ್ನುವ ಕಲ್ಪನೆ ದೃಢವಾಗಿದೆ ಎಂದರ್ಥ ಅಲ್ಲವೇ? ನಮ್ಮೆಲ್ಲರ ಒಳಮನಸ್ಸು ಭಯ, ತಿರಸ್ಕಾರ, ನಿಂದೆ ಮತ್ತು ನೋವು ಇವನ್ನು ಎಂದೆಂದು ವಿರೋಧಿಸುತ್ತದೆ. ಯುವಕರು ಕೆಲಸಗಳ್ಳರಾಗಲು ಕಾರಣ ಅವರು ಚಿಕ್ಕವರಾಗಿದ್ದಾಗ ಯಾವುದೊ ಪ್ರಯತ್ನದಲ್ಲಿ ಮತ್ತೆ ಮತ್ತೆ ಸೋತಾಗ ಅನುಭವಿಸಿದ ನೋವು, ತಿರಸ್ಕಾರ, ಭಯ "ಇದು ನಿನ್ನಿಂದ ಅಸಾಧ್ಯ" –

ಎನ್ನುವ ಭಾವನೆಗಳೇ. ಮಕ್ಕಳು ಮಾಡುವ ಕೆಲಸಗಳಲ್ಲಿ ಜಯ ದೊರಕುವಂತೆ ಮಾಡಿ ಸೋತರೂ ಸೋಲಿನಿಂದ ಕಂಗೆಡದಂತೆ ಮಾಡಿ ಜಯವನ್ನು ತಂದು ಕೊಟ್ಟರೆ, ಅವರ ವಿಶ್ವಾಸಕ್ಕೆ ಆಘಾತವಾಗುವುದಿಲ್ಲ.

(i) ಬಾಲಕನು ಯಾವುದರ ಮೇಲೆ ನಡೆದನು? ಆತನನ್ನು ಭಯದ ಕಲ್ಪನೆ ಯಾವಾಗ ಆವರಿಸುತ್ತದೆ? [3]

(ii) ಬಾಲಕನು ಇಚ್ಛಾಶಕ್ತಿಯಿಂದ ಸಲೀಸಾಗಿ ಎತ್ತರವಾದ ಹಲಗೆಯ ಮೇಲೆ ನಡೆದದ್ದು ಯಾವಾಗ? [3]

(iii) ಯುವಕರು ಕೆಲಸಗಳ್ಳರಾಗಲು ಕಾರಣವೇನು? [3]

(iv) ಇಪ್ಪತ್ತು ಅಡಿ ಎತ್ತರದ ಎರಡು ಕಂಬಗಳ ಮೇಲೆ ಇಟ್ಟ ಹಲಗೆಯಲ್ಲಿ ಬಾಲಕ ನಡೆಯಲು ಹಿಂಜರಿಯುತ್ತಾನೆ.

(a) ಮೇಲಿನ ವಾಕ್ಯದಲ್ಲಿ ಹುಡುಗನಲ್ಲಿ ಕಂಡು ಬಂದ ಭಾವ [1]

(1) ದುಃಖ

(2) ನೋವು

(3) ಭಯ

(4) ಸಂತೋಷ

(b) ವಿರೋಧ ಅಥವಾ ನಿಷೇಧಾತ್ಮಕವಲ್ಲದ ಕಲ್ಪನೆಗಳ ಸಾರ [1]

(1) ಇಚ್ಛಾಶಕ್ತಿ

(2) ವಿಶ್ವಾಸ

(3) ದೃಢಸಂಕಲ್ಪ

(4) ಗಾಬರಿ

(c) ನಿಯಮಿತವಾಗಿ ಮಾಡಿದ, ಶ್ರಮದ ಅಭ್ಯಾಸದಿಂದ ಈ ರಚನಾತ್ಮಕ ಕಲ್ಪನೆಯು ದೃಢವಾಯಿತು. [1]

(1) ಅಸಾಧ್ಯ

(2) ಜಯ

(3) ಸೋಲು

(4) ಸಾಧ್ಯ

(v) ಇಚ್ಛಾಶಕ್ತಿಯು "ನಡೆಯಲು ಯತ್ನಿಸು ಬಹುಮಾನ ಸಿಗುತ್ತದೆ" ಎಂದು ಬಾಲಕನನ್ನು ಪ್ರೇರೇಪಿಸುತ್ತದೆ.

(a) ಬಹುಮಾನ ಇದಕ್ಕೆ ಸಮಾನ ಅರ್ಥಕೊಡುವ ಪದ [1]

(1) ಉಡುಗೆ

(2) ಉಡುಗೊರೆ

(3) ಸನ್ಮಾನ

(4) ಒಡವೆ

aglasem.com

(b) ಒಳಮನಸ್ಸು ಎಂದರೆ [1]

(1) ಅಂತರಂಗ

(2) ಬಹಿರಂಗ

(3) ಬಾಹ್ಯ

(4) ಅಂತರ

(c) ಬಾಲಕ ನಿರ್ಭೀತಿಯಿಂದ ಸಲೀಸಾಗಿ ನಡೆದಿರುವುದು [1]

(1) ಹಲಗೆಯು 10 ಅಡಿ ಎತ್ತರದಲ್ಲಿದ್ದಾಗ

(2) ಹಲಗೆಯು 20 ಅಡಿ ಎತ್ತರದಲ್ಲಿದ್ದಾಗ

(3) ನೆಲದ ಮೇಲೆ ಇದ್ದಾಗ

(4) ಬಹುಮಾನ ಸಿಗುತ್ತದೆ ಎಂದಾಗ

Question 3

(A) Answer the following questions as per the instructions given.

ಕೆಳಗಿನ ಪ್ರಶ್ನೆಗಳಿಗೆ ಸೂಚನೆಯ ಪ್ರಕಾರ ಉತ್ತರಿಸಿ.

(i) ಕೆಳಗಿನ ವಾಕ್ಯದ ಶುದ್ಧರೂಪ ಬರೆಯಿರಿ. [1]

ಮಕ್ಕಳ ಬೆಳವಣಿಗೆಗೆ ಆಲು ಅತಿ ಉಪಯುಕ್ತವಾಗಿದೆ.

(ii) ಬಿಟ್ಟು ಹೋಗಿರುವ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಬರೆಯಿರಿ. [1]

ಗಿಡಗಳಿಗೆ ನೀರು ಹಾಕುವ ಕೆಲಸ ____ ರಮಾಳು ಮಾಡುತ್ತಿದ್ದಳು.

(iii) ಕೆಳಗಿನ ವಾಕ್ಯಗಳಲ್ಲಿ ಸರಿಯಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ತಾಯಿಯು ಮಕ್ಕಳಿಗೆ ಊಟವನ್ನು ಬಡಿಸಿದನು.

(b) ತಾಯಿಯ ಮಕ್ಕಳಿಗೆ ಊಟವನ್ನು ಬಡಿಸಿದನು.

(c) ತಾಯಿಯು ಮಕ್ಕಳಿಗೆ ಊಟವನ್ನು ಬಡಿಸಿದಳು.

(d) ತಾಯಿಗೆ ಮಕ್ಕಳಿಗೆ ಊಟಕ್ಕೆ ಬಡಿಸಿದರು.

(iv) ತಪ್ಪಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ಮಾರಪ್ಪನು ಕುರಿಗಳನ್ನು ಸಾಕಿದನು

(b) ಮಾರಪ್ಪನ ಬಳಿ ಅನೇಕ ಕುರಿಗಳಿದ್ದವು

(c) ಮಾರಪ್ಪನು ಕುರಿಗಳಿಗೆ ಸಾಕಿದನು

(d) ಮಾರಪ್ಪನ ಕುರಿಗಳು ಹುಲ್ಲನ್ನು ಮೇಯುತ್ತಿದ್ದವು

(v) ಕೆಳಗಿನ ವಾಕ್ಯದಲ್ಲಿ ಗೆರೆ ಎಳೆದ ಪದದ ಇನ್ನೊಂದು ಅರ್ಥ ಬರೆಯಿರಿ. [1]

ರಾಘಣ್ಣನು ಕೃಷಿಯ ಜೊತೆಗೆ ಇತರ ಉಪಕಸುಬನ್ನು ಮಾಡಿ ಹಣ ಗಳಿಸುತ್ತಿದ್ದ.

(a) ಸಂಪಾದಿಸು

(b) ಖರೀದಿಸು

(c) ವಿಭಾಗಿಸು

(d) ರವಾನಿಸು

(B) Use the idioms in the following sentences as per the instructions given.

ಕೆಳಗಿನ ಭಾಷಾವೈಶಿಷ್ಟ್ಯಗಳನ್ನು ಗಮನಿಸಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.

(i) ಕೆಳಗಿನ ಗಾದೆಯ ಅರ್ಥ ಬರೆಯಿರಿ. [1]

ಆಪತ್ತಿಗಾದವನೇ ನೆಂಟ

(ii) ಕೆಳಗಿನವುಗಳಲ್ಲಿ ಸರಿಯಾದ ಗಾದೆಯನ್ನು ಆರಿಸಿ ಬರೆಯಿರಿ. [1]

(a) ಬೆಳೆಯ ಸಿರಿ ಗಿಡದಲ್ಲಿ

(b) ಬೆಳೆಯ ಸಿರಿ ಮೊಳಕೆಯಲ್ಲಿ

(c) ಬೆಳಗೆ ಸಿರಿ ಬೀಜದಲ್ಲಿ

(d) ಬೆಳೆದ ಸಿರಿ ಮರದಲ್ಲಿ

(iii) ಕೆಳಗಿನ ವಾಕ್ಯಕ್ಕೆ ಸರಿಹೊಂದುವ ಗಾದೆಯನ್ನು ಆರಿಸಿ ಬರೆಯಿರಿ. [1]

ಚಿಕ್ಕವರಿದ್ದಾಗಲೇ ತಪ್ಪುಗಳನ್ನು ತಿದ್ದಿಕೊಳ್ಳದವರು ದೊಡ್ಡವರಾದ ಮೇಲೆ ತಿದ್ದಿ ಕೊಳ್ಳಲು ಸಾಧ್ಯವಿಲ್ಲ.

(a) ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

(b) ಮನಸ್ಸಿದ್ದರೆ ಮಾರ್ಗ

(c) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ

(d) ತಾಳಿದವನು ಬಾಳಿಯಾನು

(C) Use the proverbs in the following sentences as per the instructions given.

ಕೊಟ್ಟಿರುವ ಗಾದೆ ಮತ್ತು ನುಡಿಗಟ್ಟನ್ನು ಸೂಚನೆಯಂತೆ ಬರೆಯಿರಿ.

(i) ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ [1]

ಊಟ ಬಲ್ಲವನಿಗೆ ರೋಗವಿಲ್ಲ _____ _____

(a) ಆಟ ಬಲ್ಲವನಿಗೆ ಸೋಲಿಲ್ಲ

(b) ಮಾತು ಬಲ್ಲವನಿಗೆ ಜಗಳವಿಲ್ಲ

(c) ಪಾಠ ಬಲ್ಲವನಿಗೆ ಮಿತಿಯಿಲ್ಲ

(d) ಓಟ ಬಲ್ಲವನಿಗೆ ಗೆಲುವಿಲ್ಲ

(ii) ಕೆಳಗಿನ ನುಡಿಗಟ್ಟಿನ ಅರ್ಥ ತಿಳಿಸಿ [1]

ಕರುಳು ಕಿತ್ತು ಬರು ಎಂದರೆ

(a) ಬಹಳ ದುಃಖವಾಗು

(b) ಹೊಟ್ಟೆಕಿಚ್ಚು

(c) ಬಹಳ ಕಷ್ಟವಾಗು

(d) ಬಹಳ ಸಿಟ್ಟಾಗು

SECTION B

LITERATURE - 40 MARKS

*Answer **four** questions from this section on **any three** out of the four prescribed textbooks.*

ನಿಗದಿತ ನಾಲ್ಕು ಪಠ್ಯಪುಸ್ತಕಗಳಲ್ಲಿ ಯಾವುದಾದರೂ ಮೂರರಲ್ಲಿ ಈ ವಿಭಾಗದಿಂದ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.

ಕನ್ನಡ ಕಿರಣ [KANNADA KIRANA]

Question 4

'ಮಟಮಟ ಮಧ್ಯಾಹ್ನ ಅಂಥ ಬಿಸಿಲಿನಲ್ಲಿ ಆ ಹಳ್ಳಿಯಲ್ಲಿ ಕೂಡ ಯಾರು ಮನೆಯಿಂದ ಹೊರಬೀಳಲಾರರು.'

(i) ಬಾವಿಯ ಬಳಿ ಕೇಳಿ ಬರುತ್ತಿದ್ದ ಸದ್ದು ಯಾವುದಾಗಿತ್ತು? [1]

(ii) ಶಾಸ್ತ್ರಿಗಳ ಸೊಸೆಯ ಬಗ್ಗೆ ಊರ ಕೆಲವರು ಹೇಳಿದ ಅಣಕದ ಮಾತುಗಳೇನು? [2]

(iii) ಬಾವಿಯ ಬಳಿ ಬಂದ ಸೊಸೆ ಏನು ಮಾಡಿದಳು? [2]

(iv) ಶಾಸ್ತ್ರಿಗಳ ಸೊಸೆ ಬಾವಿಗೆ ಇಳಿಯಲು ಸಿದ್ದಳಾದಾಗ ಏನಾಯಿತು? ವಿವರಿಸಿ. [5]

Question 5 [10]

ಸಾವಿತ್ರಿ ಯಮನಲ್ಲಿ ಬೇಡಿದ ಮೊದಲ ಎರಡು ವರಗಳಾವುವು? ಅದಕ್ಕೆ ಯಮನ ಉತ್ತರವೇನು?

Question 6 [10]

ಒಲೆಯ ಮುಂದೆ ಚಳಿ ಕಾಯಿಸಲು ಕುಳಿತವರಿಗೆ ವಾಗೀಶಿ ಹೇಗೆ ಒಂದು ವಸ್ತುವಾದಳು? ವಿವರಿಸಿ.

ಕಾವ್ಯ ಸುಧೆ (KAVYA SUDHE)

Question 7

'ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ [ಜೇಡರ ದಾಸಿಮಯ್ಯ]
ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವರು [ಅಲ್ಲಮ ಪ್ರಭು]'

(i) ಜೇಡರ ದಾಸಿಮಯ್ಯ ಅವರ ಅಂಕಿತನಾಮ ಯಾವುದು ? [1]

(ii) ಕುನ್ನಿಗಳಿಗೆ ನಾನು ಏನು ಹೇಳಲಿ ಎಂದು ವಚನಕಾರರು ಹೇಳಲು ಕಾರಣವೇನು? [2]

(iii) ಅಳಿಮನದವರ ಭಕ್ತಿಯ ಬಗ್ಗೆ ಜೇಡರ ದಾಸಿಮಯ್ಯ ಅವರು ಏನು ಹೇಳಿದ್ದಾರೆ? [2]

(iv) ಗುಹೇಶ್ವರನು ಯಾರನ್ನು ಮೆಚ್ಚುವುದಿಲ್ಲ? ವಿವರಿಸಿ. [5]

Question 8 [10]

ನಮ್ಮ ಬಾಳ ಪಯಣವನ್ನು ಹೇಗೆ ಸಾಗಿಸಬೇಕೆಂದು ಕವಿ ಕುವೆಂಪುರವರು ದೋಣಿ ಹಾಡು ಪದ್ಯದಲ್ಲಿ ವಿವರಿಸಿದ್ದಾರೆ.

Question 9 [10]

ಇರುಳು ಎಂಬುದೊಂದು ಸುಂದರ ಸಮಯವಾಗಿದೆ. ಇರುಳೇ ನೀನಿಂದು ಸರಿಯಬೇಡ ಎಂದು ಕವಿ ಕೈಮುಗಿದು ಕೇಳಲು ಕಾರಣಗಳೇನು? ವಿವರಿಸಿ.

ಪ್ರೇಮಭಿಕ್ಷು (PREMA BHIKSHU)

Question 10

'ಬುದ್ಧನ ಮನಸ್ಸಿನಲ್ಲಿ ಹಿಂದೆ ಎಂದೋ , ಬಹುಶಃ ಎಷ್ಟೋ ಜನ್ಮಗಳ ಹಿಂದೆ ನಡೆದಿರಬಹುದಾದ ಘಟನೆ ಕಾಣಿಸಿಕೊಂಡಿತು. ಅದು ಕಾಶೀರಾಜನಾದ ಬ್ರಹ್ಮದತ್ತನಿಗೆ ಸಂಬಂಧಿಸಿದ್ದು.'

(i) ದೀಘಿತಿ ತನ್ನ ಮಗನನ್ನು ಕಂಡಾಗ ಕೊನೆಯದಾಗಿ ಹೇಳಿದ ಬುದ್ಧಿವಾದದ ಮಾತೇನು? [1]

(ii) ಬ್ರಹ್ಮದತ್ತನು ತನ್ನ ಸೇವಕರಿಗೆ ಏನೆಂದು ಅಪ್ಪಣೆ ಮಾಡಿದನು? [2]

(iii) ದೀಘಿತಿ ತನ್ನ ಮಗನನ್ನು ಬೇರೆಲ್ಲೊ ಬೆಳೆಸಲು ಏಕೆ ನಿರ್ಧರಿಸಿದ? [2]

(iv) ಅನಾಥ ಪಿಂಡಿಕನು ಅಂಗುಲೀಮಾಲನನ್ನು ಪರಿಚಯ ಮಾಡಿಕೊಟ್ಟಿದ್ದನ್ನು ವಿವರವಾಗಿ ಬರೆಯಿರಿ. [5]

Question 11 [10]

ಬುದ್ಧನು ಅಂಗುಲೀಮಾಲನಿಗೆ ಹೇಳಿದ ಮೊದಲ ಕತೆ ಯಾವುದು?

Question 12 [10]

ಬುದ್ಧನು ಹೇಳಿದ ಮಹಾಪಿಂಗಲನ ಕತೆಯನ್ನು ಬರೆಯಿರಿ.

ಹೆಬ್ಬೆರಳು (HEBBERALU)

Question 13

'ಏಂ ಮರುಳೊ ನಮ್ಮೇಕಲವ್ಯನಿಗೆ! ನಮ್ಮೂರ
ಬಳಿಯ ಬಯಲಲಿ ದ್ರೋಣನ ಮಣ್ಣ ಗೊಂಬೆಯ
ನ್ನಿರಿಸಿ ಮುಂದಕೆ ನಿಂದು ಸರಳ್ಗಳನ್ನೆಸೆದೆಸೆದು ಬಿಲ್ಲು ವಿದ್ಯೆಯ ಕಲಿವನಂತೆ'

(i) ಈ ಮೇಲಿನ ಮಾತನ್ನು ಯಾರು ಯಾರಿಗೆ ಹೇಳಿದರು? [1]

(ii) ಏಕಲವ್ಯನು ನನ್ನ ಮನಸು ದ್ರೋಣರ ಕಡೆಗೆ ಸೆಳೆಯುತಿದೆ, ಅವರಿಂದ ಬಿಲ್ಲುಗಾರನಾಗಬೇಕೆನಿಸಿದೆ ಎಂದಾಗ ಹಿರಣ್ಯಧನುವಿನ ಉತ್ತರವೇನು? [2]

(iii) ತಂದೆ ಮಗನ ತಲೆಯ ಮೇಲೆ ಕೈಯಿಟ್ಟು ಏನೆಂದು ಹರಸಿದ? [2]

(iv) ಹಿರಣ್ಯಧನು ಏಕಲವ್ಯನಿಗೆ ಹೇಳಿದ ಬುದ್ಧಿ ಮಾತುಗಳೇನು? [5]

Question 14 [10]

ಏಕಲವ್ಯನ ಮಣ್ಣಗೊಂಬೆಯ ಅಭ್ಯಾಸದ ಬಗ್ಗೆ ಹಿರಣ್ಯಧನುವಿನ ಅಭಿಪ್ರಾಯ ಮತ್ತು ಅವನ ಬಿಲ್ವಿದ್ಯೆಯನ್ನು ಗೊಂದಳದವರು ಹೊಗಳಿದಾಗ ಹಿರಣ್ಯಧನುವಿನ ಪ್ರತ್ಯುತ್ತರವೇನು ?

Question 15 [10]

ಪಾರ್ಥನು ಜೋಲುಮೋರೆ ಹಾಕಿ ಬಂದಾಗ ದ್ರೋಣಾಚಾರ್ಯರು ಹೇಗೆ ಪ್ರತಿಕ್ರಿಯಿಸಿದರು? ಆಗ ಗೊಂದಳದವರು ದ್ರೋಣರಿಗೆ ಏನು ಹೇಳಿದರು?